KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/270426/2026/ 991

ದಿನಾಂಕ: 27/10/2026

ಸುತ್ತೋಲೆ

ವಿಷಯ: ನವೆಂಬರ್/ಡಿಸೆಂಬರ್ 2026 ರಲ್ಲಿ ಜರುಗುವ **ಸ್ನಾತಕ ಪದವಿ R- NEP 1 ನೇ ಸೆಮಿಸ್ಟರ್‌ನ** (ರೆಗ್ಯೂಲರ್/ರಿಪೀಟರ್) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ/ಶುಲ್ಕ ತುಂಬುವ ಅವಧಿಯನ್ನು ಕೊನೆಯ ಬಾರಿಗೆ ವಿಸ್ತರಿಸಿದ ಕುರಿತು.

ಉಲ್ಲೇಖ: ಅಧಿಸೂಚನೆ ನಂ:/ಕವಿವಿ/ಪರೀಕ್ಷಾ/ಜಿಎಡಿ/110926/2026/926 ದಿನಾಂಕ:07/10/2026

****@****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಆಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಮೂಲಕ ತಿಳಿಸುವುದೇನೆಂದರೆ **ಸ್ನಾತಕ ಪದವಿಯ R-NEP-1** ನೇ ಸೆಮಿಸ್ಟರ್ ಕೋರ್ಸುಗಳಿಗೆ ಲಿಖಿತ ಪರೀಕ್ಷೆಗಳನ್ನು ಜರುಗಿಸುವ ಸಲುವಾಗಿ ಉಲ್ಲೇಖಿತ ಅಧಿಸೂಚನೆಯ ಮೂಲಕ ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅಧಿಸೂಚನೆಯನ್ನು ದಂಡಸಹಿತವಾಗಿ ತುಂಬಲು ದಿನಾಂಕ:24/10/2026 ರ ವರೆಗೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ನವೆಂಬರ್/ಡಿಸೆಂಬರ್ 2026 ರಲ್ಲಿ ಜರುಗುವ ಎಲ್ಲ **ಸ್ನಾತಕ ಪದವಿಯ R-NEP-1** ನೇ ಸೆಮಿಸ್ಟರ್ ರೆಗ್ಯೂಲರ್/ರಿಪೀಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಕಾರಣಾಂತರಗಳಿಂದ ಪರೀಕ್ಷಾ ಅರ್ಜಿ /ಶುಲ್ಕ ತುಂಬದೆ ಇರುವಂತಹ ವಿದ್ಯಾರ್ಥಿಗಳು ನೇರವಾಗಿ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಪರ್ಕಿಸಿ ವಿಚಾರಿಸುತ್ತಿದ್ದು ಕಂಡು ಬಂದಿದೆ ಆದಕಾರಣ ಕೊನೆಯ ಬಾರಿ ದಿನಾಂಕವನ್ನು ಈ ಕೆಳಕಾಣಿಸಿದ ದಂಡದೊಂದಿಗೆ ಅರ್ಜಿ ಸಲ್ಲಿಸಲು **ದಿನಾಂಕ:27/10/2026 ರಿಂದ 31/10/2026** ರ ವರೆಗೆ ದಿನಾಂಕವನ್ನಾಗಿ ನಿಗದಿಪಡಿಸಿ ಕೊನೆಯ ಬಾರಿಗೆ ಅವಕಾಶ ನೀಡಲಾಗಿದೆ.

ಅ.ನಂ	ಸೆಮಿಸ್ಟರ್	ದಂಡದ ಮೊತ್ತ
1	ಸ್ನಾತಕ ಪದವಿಯ R-NEP 1, ನೇ ಸೆಮಿಸ್ಟರ್ ರೆಗ್ಯೂಲರ್/ರಿಪೀಟರ್	ಅಧಿಸೂಚನೆ ನಂ.ಕವಿವಿ/ಪರೀಕ್ಷಾ/ಜಿಎಡಿ/110926/926 ದಿನಾಂಕ:07/10/2026 ರಲ್ಲಿ ತಿಳಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಮೊದಲನೇ ದಂಡ ರೂ.220/-, ಎರಡನೇ ದಂಡ ರೂ.240/- ಗಳೊಂದಿಗೆ ಪ್ರತಿ ದಿನ ರೂ.500/- ರಂತೆ ದಂಡದೊಂದಿಗೆ ದಿನಾಂಕ:27/10/2026 ರಿಂದ 31/10/2026 ರ ವರೆಗೆ ಪರೀಕ್ಷಾ ಶುಲ್ಕವನ್ನು SBI Collect ಮುಖಾಂತರ ತುಂಬುವುದು

ಸದರ ವಿಷಯವನ್ನು ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಅರ್ಜಿ/ಶುಲ್ಕಗಳನ್ನು ತುಂಬಲು ತಿಳಸಲಾಗಿದೆ. ಮುಂದುವರೆದು, ವಿದ್ಯಾರ್ಥಿಗಳು ಭರ್ತಿ ಮಾಡಿದ ಪರೀಕ್ಷಾ ಅರ್ಜಿ/ಶುಲ್ಕಗಳ ವಿವರಗಳನ್ನು ಪರಿಶೀಲಿಸಿ ಯಾದಿಯನ್ನು **ದಿನಾಂಕ:02/11/2026** ರಂದು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

ವಿಶೇಷ ಸೂಚನೆ: ಪರೀಕ್ಷಾ ಅರ್ಜಿ /ಶುಲ್ಕ ತುಂಬಲು ಸದರಿ ಅವಧಿಯು ಕೊನೆಯ ಅವಕಾಶವಾಗಿರುವದರಿಂದ ಕೊನೆಯ **ದಿನಾಂಕ:02/11/2026** ರ ನಂತರದಲ್ಲಿ ಯಾವುದೇ ತರಹದ ಪರೀಕ್ಷಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅದಕ್ಕೆ ವಿದ್ಯಾರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.

27/10/2026
ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1) ಸಿಸ್ಟಮ್ ಎನಾಲಿಸ್ಟ, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಂತರ್ಜಾಲದಲ್ಲಿ ಪ್ರಕಟಿಸುವುದು)
3) ಕುಲಪತಿಗಳ, ಕುಲಸಚಿವರ, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
4) ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.